Scheme for providing for more water supply in Bangalore City

505 SRI T. R. SHAMANNA (Basavanagudi).—Will the Minister for Municipal Administration be pleased to state :—

(*a*) whether it has come to the notice of the Government that supply of water in many parts of the City is far from satisfactory ;

(*b*) if so, the steps taken by Government to meet the growing demand for water ;

(*c*) whether Government has any scheme before it to take up supply of more water, if so, when the scheme will be completed ?

SRI H. C. SRIKANTAIAH (Minister for Municipal Administration).

(*a*) Water supply in the Bangalore City is for about 4 hours in the morning and three to four hours in the evening.

(*b*) and (*c*) The Government has already taken action to work out the Cauvery II stage and implement the schemes as early as possible. This will take minimum of 4 years from the date of sanction. The project is being examined for inclusion in the plan in consultation with the Government of India.

ಶ್ರೀ ಟಿ.ಆರ್. ಶಾಮಣ್ಣ.—ಮಾನ್ಯ ಮಂತ್ರಿಗಳು ಉತ್ತರದಲ್ಲಿ ಪ್ರತಿದಿನವೂ ನಾಗರೀಕರಿಗೆ ೭ ಗಂಟೆ ನೀರನ್ನು ಒದಗಿಸುತ್ತಾ ಇದೆ ಎಂದು ಹೇಳಿದ್ದಾರೆ. ಆದರೆ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿಲ್ಲ ಎಂದು ಕಾಣುತ್ತದೆ. ಅನೇಕ ಕಡೆಗಳಲ್ಲಿ ಕೇವಲ ಎರಡು ಗಂಟೆ ಕೂಡ ನೀರು ಬರುತ್ತಾ ಇಲ್ಲ, ಮತ್ತೆ ಕೆಲವು ಕಡೆ ರಾತ್ರಿ ಸರಿಹೊತ್ತಿನಲ್ಲಿ ನೀರು ಬರುತ್ತದೆ. ನೀರು ಮೊದಲನೇ ಮಹಡಿಗೆ, ಎರಡನೇ ಮಹಡಿಗೆ ಹತ್ತುವ ಸಂದರ್ಭವೇ ಇಲ್ಲ. ಇದರಿಂದ ಬೆಂಗಳೂರು ನಗರದ ನಾಗರೀಕರಿಗೆ ಬಹಳ ತೊಂದರೆಯಾಗಿದೆ ಎನ್ನುವ ಅಂಶ ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿಲ್ಲವೇ ?

†ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಕೆಲವು ಕಡೆ ತೊಂದರೆಯಾಗಿದೆ ಎನ್ನುವುದು ಸರ್ಕಾರದ ಗಮನಕ್ಕೆ ಬಂದಿದೆ. ಸೈಸಿಫಿಕ್ಕಾಗಿ ಯಾವ ಯಾವ ಏರಿಯಾದಲ್ಲಿ ತೊಂದರೆಯಾಗಿದೆಯೆನ್ನುವುದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ ಅದನ್ನು ಸರಿಪಡಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಟಿ. ಆರ್. ಶಾಮಣ್ಣ.—ಪ್ರತಿದಿನ ಬೆಂಗಳೂರು ನಗರಕ್ಕೆ ಬರುತ್ತಿದ್ದಂಥ ನೀರು ೬೩ ಮಿಲಿಯನ್ ಗ್ಯಾಲನ್‌ನಿಂದ ೫೩ ಮಿಲಿಯನ್‌ಗೆ ಇಳಿದಿರತಕ್ಕಂಥಾದ್ದು ಮಾನ್ಯ ಮಂತ್ರಿಗಳ ಗಮನಕ್ಕೆ ಬಂದಿಲ್ಲವೆ ? ಇನ್ನೆರಡು ತಿಂಗಳಲ್ಲಿ ಮಳೆ ಬರದೇ ಹೋದರೆ ನೀರು ಇನ್ನೂ ಖೋತ ಆಗತಕ್ಕ ಸಂದರ್ಭ ವಿಲ್ಲವೆ. ಆದುದರಿಂದ ನೀರಿಗೆ ತೊಂದರೆಯಾಗಿರತಕ್ಕ ಸಂದರ್ಭದಲ್ಲಿ ನಾಗರೀಕರಿಗೆ ತಕ್ಷಣ ಪರಿಹಾರ ಕೊಡುವ ಬಗ್ಗೆ ಯಾವ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ ನನಗೆ ಗೊತ್ತಿರುವುದಕ್ಕಿಂತ ಹೆಚ್ಚಿಗೆ ಮಾನ್ಯ ಶಾಮಣ್ಣನವರಿಗೆ ಗೊತ್ತಿದೆ. ಏಕೆಂದರೆ, ಅವರು ಕನ್‌ಸಲ್ಟೇಟೀವ್ ಕಮಿಟಿ ಸದಸ್ಯರಾಗಿದ್ದಾರೆ. ವಿವರವಾದ ಮಾಹಿತಿಗಳು ಅವರ ಹತ್ತಿರ ಇವೆ. ನನಗೆ ಸಿಗದೇ ಇದ್ದಂಥ ಮಾಹಿತಿಗಳೂ ಅವರ ಹತ್ತಿರ ಇವೆ. ಈ ಒಂದು ಕುಡಿಯುವ ನೀರಿನ ಸಮಸ್ಯೆಯನ್ನು ಯಾವ ರೀತಿ ನಿವಾರಣೆ ಮಾಡಬೇಕೋ, ಅದಕ್ಕೆ ಏನು ಮುಂಜಾಗ್ರತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನು ಸರ್ಕಾರ ಹಾಕುತ್ತಾ ಇದೆ. ಕೇಂದ್ರ ಸರ್ಕಾರದಿಂದ ಕಾವೇರಿ ಸೆಕೆಂಡ್ ಸ್ಟೇಜ್ ಸ್ಕೀಂ ಮಂಜೂರಾತಿ ಪಡೆದು ಬಂದಿದೆ. ಅರ್ಕಾವತಿ ಫೋರ್ತ್ ಮೆಯಿನ್ ಪ್ರಾರಂಭ ಮಾಡಬೇಕು ಎಂದು ಸರ್ಕಾರ ತೀರ್ಮಾನ ತೆಗೆದುಕೊಂಡಿದ್ದಾಗ್ಯೂ ಅದನ್ನು ನಿಲ್ಲಿಸಿದೆ. Sources is not dependable.

ಇದರ ಬಗ್ಗೆ ಲೆಕ್ಕಾಚಾರ ಹಾಕಿ ನೋಡಿದಾಗ ನಾವು ಖಾಯಂ ಆಗಿ ಇದನ್ನು ನಂಬುವುದಕ್ಕೆ ಸಾಧ್ಯವಿಲ್ಲ. ಕಾವೇರಿ ಸೆಕೆಂಡ್ ಸ್ಟೇಜನ್ನು ತೆಗೆದುಕೊಳ್ಳಬೇಕು ಎಂದು ಕಾರ್ಯಕ್ರಮ ಹಾಕಿ ಸರ್ಕಾರ ಅದಕ್ಕೆ ಹಣ ಒದಗಿಸಬೇಕು ಎಂದು ಏರ್ಪಾಟು ಮಾಡಿದೆ. ಈ ಕಾರ್ಯಕ್ರಮವನ್ನು ತಕ್ಷಣ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಪಿ. ರಾಮದೇವ್.—ಸ್ವಾಮಿ ಮಾನ್ಯ ಮಂತ್ರಿಗಳವರು ತಮ್ಮ ಉತ್ತರದಲ್ಲಿ ಬೆಂಗಳೂರು ನಾಗರೀಕರಿಗೆ ಕುಡಿಯಲು ನೀರು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದರೆ ನಾನು ಇದರ ಬಗ್ಗೆ ಸರ್ಕಾರಕ್ಕೆ ಸಾಕಷ್ಟು ಸಾರಿ ಕಾಗದ ಬರೆದಿದ್ದೇನೆ ಹಾಗೂ ಅನೇಕ ಪ್ರದೇಶಗಳಲ್ಲಿ ಬಂದು ತೊಟ್ಟು ನೀರು ಬಾರದೇ ಇರುವುದನ್ನು ತೋರಿಸುವುದಕ್ಕೋಸ್ಕರವಾಗಿ ಪತ್ರಿಕೆಗಳವರನ್ನೂ ಕರೆದುಕೊಂಡು ಹೋಗಿದ್ದೇನೆ, ನಿಜವಾಗಿಯೂ ಎಷ್ಟೋ ಕಡೆ ನೀರೇ ಬರುತ್ತಿಲ್ಲ. ಕಾವೇರಿ ಎರಡನೆಯ ಯೋಜನೆ ಪೂರ್ಣವಾಗ ಬೇಕಾದರೆ ಇನ್ನು ೪-೫ ವರ್ಷಗಳೇ ಬೇಕಾಗುತ್ತವೆ. ಆದರೆ ಈಗಲೇ ನೀರಿನ ತೀವ್ರ ಅಭಾವ ಕಂಡು ಬಂದಿರುವುದರಿಂದ ಎಲ್ಲರಿಗೂ ಕುಡಿಯಲು ನೀರು ಕೊಡುವ ಬಗ್ಗೆ ಜಾಗ್ರತೆ ಏನಾದರೂ ಕ್ರಮ ತೆಗೆದು ಕೊಳ್ಳುತ್ತೀರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ, ಯಾರೋ ಪತ್ರಿಕೆಯವರನ್ನು ಕರೆದು ಕೊಂಡು ಹೋಗಿ ತೋರಿಸಿದ್ದೇವೆಂದು ಹೇಳಿದರು. ಅವರಿಗೆ ತೋರಿಸಿದರೆ ನೀರು ಬರುತ್ತದೆಯೇ ?

ಶ್ರೀ ಪಿ. ರಾಮದೇವ್.—ತಮಗೂ ಕೂಡ ನಾನು ಕಳೆದ ವರ್ಷವೇ ಹೇಳಿದ್ದೇನೆ. ನಿಮ್ಮ ಅಧಿಕಾರಿಗಳಲ್ಲಿ ಕೆಲವರನ್ನೂ ಸಹ ಕರೆದುಕೊಂಡು ಹೋಗಿ ತೋರಿಸಿ, ನಿಮಗೂ ಕಾಗದ ಬರೆದಿದ್ದೇನೆ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಸಂಬಂಧಪಟ್ಟ ನೀರು ಸರಬರಾಜು ಮಾಡತಕ್ಕ ಅಧಿಕಾರಿಗಳಿಗೆ ಕರೆದುಕೊಂಡು ಹೋಗಿದ್ದರೆ ನೀರು ಬರ್ತಿತ್ತು ಆದರೆ ಮಾನ್ಯ ಸದಸ್ಯರು ಪತ್ರಿಕೆಯವರನ್ನು ಕರೆದು ಕೊಂಡು ಹೋದರೆ ಏನು ಬರುತ್ತದೆ. ಆದುದರಿಂದ ಅವರಿಗೆ ತಮ್ಮ ಮೂಲಕ ಇಷ್ಟು ಮಾತ್ರ ಹೇಳಬಲ್ಲೆ, ಎಲ್ಲಿ ತೊಂದರೆ ಇದೆ ಎನ್ನುವ ಬಗ್ಗೆ ನಮ್ಮ ಗಮನಕ್ಕೆ ತಂದರೆ ಅಲ್ಲಿ ಆದಷ್ಟು ಮಟ್ಟಿಗೆ ಆ ನೀರಿನ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ಬೆಂಗಳೂರು ನಗರಕ್ಕೆ ಕಾವೇರಿ ಯೋಜನೆಯಿಂದ, ತಿಪ್ಪಗೊಂಡನಹಳ್ಳಿ ಜಲಾಶಯದಿಂದ ಮತ್ತು ಪೆಸರಘಟ್ಟ ಈ ೩ ಸ್ಥಳಗಳಿಂದ ನೀರನ್ನು ಸರಬರಾಜು ಮಾಡಲಾಗುತ್ತಿದೆ. ಸುಮಾರು ೧೫ ಗ್ಯಾಲನ್ ಪರ್ ಕ್ಯಾಪಿಟಾ ಇನ್‌ಕಂ ಸಿಗುತ್ತದೆ. ಕೆಲವು ಕಡೆ ತೊಂದರೆಯಾಗುತ್ತಿದೆ. ಬೆಂಗಳೂರು ನಗರ ಯಾವ ರೀತಿಯಾಗಿ ಬೆಳೆಯುತ್ತಿದೆ ಎಂಬುದು ಎಲ್ಲರಿಗೂ ಗೊತ್ತಿದೆ. ಯಲಹಂಕದಲ್ಲಿ ಸೆಟಲೈಟ್ ಮತ್ತು ಇನ್ನು ಮುಂತಾದ ದೊಡ್ಡ ದೊಡ್ಡ ಕಾರ್ಖಾನೆಗಳು ಆಗುತ್ತಿರುವುದರಿಂದ ಅಲ್ಲಿಗೆಲ್ಲಾ ನೀರು ಸರಬರಾಜು ಮಾಡುತ್ತಿರುವುದರಿಂದ ನೀರಿನ ತೊಂದರೆಯಾಗುತ್ತಿದೆ. ಆದುದರಿಂದ ಈಗ ಆಗುತ್ತಿರುವ ತೊಂದರೆಯನ್ನು ನಿವಾರಣೆ ಮಾಡುವುದಕ್ಕೋಸ್ಕರವಾಗಿ ೫೬ ಕೋಟಿ ರೂಪಾಯಿಗಳ ಕಾವೇರಿ ಎರಡನೆಯ ಯೋಜನೆಯನ್ನು ಆದಷ್ಟು ಜಾಗ್ರತೆ ಕಾರ್ಯಗತ ಮಾಡುವುದಕ್ಕೆ ಎಲ್ಲ ಕಾರ್ಯಕ್ರಮಗಳನ್ನು ಸರ್ಕಾರ ಹಾಕಿಕೊಂಡಿದೆ.

ಶ್ರೀ ಎಂ. ಮುಳ್ಳೂರು ಆನಂದರಾವ್.—ಬೆಂಗಳೂರು ನಗರದಲ್ಲಿ ನೀರಿನ ಸಮಸ್ಯೆ ಒಂದು ಬೃಹದಾಕಾರವಾಗಿ ಬೆಳೆದು ಜನರಲ್ಲಿ ಹಾಹಾಕಾರವುಂಟಾಗಿದೆ. ತಾವು ವಾಸ ಮಾಡುತ್ತಿರುವಂಥ ಜಾಗಗಳಲ್ಲಿ ನೀರು ಬರುತ್ತಿರಬಹುದು. ಆದರೆ ತಾವು ಬೆಂಗಳೂರ ನಗರದಲ್ಲಿ ಸರ್ವೆ ಮಾಡಿಸಿದರೆ ಕೇವಲ ೧೦ ಪರ್ಸೆಂಟ್‌ನಷ್ಟು ಕೂಡ ಜನಗಳಿಗೆ ಸರಿಯಾಗಿ ನೀರು ಸಿಗುತ್ತಿಲ್ಲ. ಎಲ್ಲಾ ಜಾಗಗಳಲ್ಲಿಯೂ ಹಾಹಾಕಾರ ಉಂಟಾಗಿದೆ ತಮ್ಮ ಹೇಳಿಕೆಯ ಪ್ರಕಾರ ಇದನ್ನು ಒಂದು ವಾರ್‌ಫುಟಿಂಗ್‌ನ ತರಹೆ ಒಂದು ಕಾರ್ಯಕ್ರಮ ಹಾಕಿ ಕೊಂಡು ಮಾಡಬೇಕಾಗಿದೆ. ಇಲ್ಲದಿದ್ದರೆ ತಾವು ಇನ್ನು ೪-೫ ವರ್ಷಗಳ ಕಾಲ ಕಾಯಬೇಕೆಂದರೆ ಬಹಳ ತೊಂದರೆಯಾಗುತ್ತದೆ. ಆದುದರಿಂದ ಆದಷ್ಟು ಜಾಗ್ರತೆ ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಿ ಕೊಂಡು ಮಾಡಿ ಇದರ ಜೊತೆಗೆ ರಿಗ್‌ವೆಲ್ಸ್‌ಗಳನ್ನು ತೆಗೆಯುವುದಕ್ಕೆ ಅನುಕೂಲವಿರುವಂಥ ಕಡೆಗಳಲ್ಲಿ ಸಾಧ್ಯವಾದರೆ ರಿಗ್‌ವೆಲ್ಸ್‌ಗಳನ್ನು ತೆಗೆಸಿ ಜನರಿಗೆ ನೀರಿನ ಅನುಕೂಲವನ್ನು ಮಾಡಿಕೊಡುತ್ತೀರಾ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಮಾನ್ಯ ಶ್ರೀ ಆನಂದರಾಯರು ಗೆದ್ದು ಬಂದಿರಕ್ಕಂಥ ಜಾಗದಲ್ಲಿ ನೀರು ಬಹಳ ಚೆನ್ನಾಗಿಯೇ ಬರುತ್ತಿದೆ. ಅಲ್ಲಿ ಏನೂ ತೊಂದರೆ ಇಲ್ಲ. ನಾನು ನೋಡಿದ್ದೇನೆ. ಆದರೂ ಮಾನ್ಯ ಸದಸ್ಯರು ಹೇಳುವ ಹಾಗೆ ಎಲ್ಲಿಯಾದರೂ ತೊಂದರೆಯಾಗಿದೆಯೆಂದು ಕಂಡು ಬರುವಂಥ ಕಡೆಗಳಲ್ಲಿ

ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಪ್ರಯತ್ನ ಮಾಡೋಣ. ನೀರನ್ನು ಒದಗಿಸತಕ್ಕದ್ದು ಸರ್ಕಾರದವರ ಮೊದಲನೆಯ ಕರ್ತವ್ಯ ಅದಕ್ಕಾಗಿ ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತೇವೆ.

ಶ್ರೀ ಐ.ಪಿ.ಡಿ. ಸಾಲಪ್ಪ.—ಬೆಂಗಳೂರು ನಗರದಲ್ಲಿ ಸುಮಾರು ೧೮೦ ಕೊಳಚೆ ಪ್ರದೇಶಗಳಲ್ಲಿ ಇವೆ. ಆದರಲ್ಲಿ ಸುಮಾರು ೬೦ ಪ್ರದೇಶಗಳಲ್ಲಿ ಮಾತ್ರ ನೀರು ಬರುತ್ತಿದ್ದು ಬಾಕಿ ೧೨೦ ಕೊಳಚೆ ಪ್ರದೇಶಗಳಲ್ಲಿ ನೀರನ್ನು ನೋಡುವುದಕ್ಕೂ ಸಾಧ್ಯವಾಗುತ್ತಿಲ್ಲ. ಕಾವೇರಿ ಎರಡನೆಯ ಯೋಜನೆ ಪೂರ್ಣವಾಗಬೇಕಾದರೆ ಇನ್ನು ೪-೫ ವರ್ಷಗಳು ಬೇಕಾಗುತ್ತದೆ. ಅಲ್ಲಿಯವರೆಗೆ ಕಾಯುಬೇಕೆಂದರೆ ಬಹಳ ತೊಂದರೆಯಾಗುತ್ತದೆ ಆದುದರಿಂದ ಕೊಳಚೆ ಪ್ರದೇಶಗಳಲ್ಲಿರುವ ಜನರಿಗೆ ನೀರನ್ನು ಒದಗಿಸಲು ಕೊಳವೆ ಭಾವಿಗಳನ್ನೇನಾದರೂ ಒದಗಿಸುತ್ತೀರಾ ಸ್ವಾಮಿ ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅದನ್ನು ಸರ್ಕಾರ ಪರಿಶೀಲಿಸುತ್ತದೆ.

ಶ್ರೀ ಮೈಕೆಲ್ ಬಿ. ಫರ್ನಾಂಡೀಸ್.—ಕಾವೇರಿ ಮೊದಲನೆಯ ಯೋಜನೆಯಿಂದ ಯಾವಾಗ ನೀರು ಸಾಲದೇ ಹೋಯಿತೋ ಆಗ ಎರಡನೆಯ ಯೋಜನೆಯನ್ನು ಕಾರ್ಯಗತ ಮಾಡಬೇಕಾಗಿತ್ತು ಅಲ್ಲವೇ ? ಆ ರೀತಿ ವಿಳಂಬ ಮಾಡಿರುವುದಕ್ಕೆ ಕಾರಣವೇನು ?

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಕಾವೇರಿ ಎರಡನೆಯ ಯೋಜನೆಯನ್ನು ತಕ್ಷಣವೇ ಪ್ರಾರಂಭ ಮಾಡಬೇಕು ಎನ್ನತಕ್ಕದ್ದು ಸರ್ಕಾರದವರ ಪರಿಶೀಲನೆಯಲ್ಲಿ ಇರಲಿಲ್ಲ. ಅರ್ಕಾವತಿ ಲಿನೇ ಮೇಯನ್‌ಗೆ ೧೪ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನೀರನ್ನು ಸರಬರಾಜು ಮಾಡಬೇಕು ಎನ್ನತಕ್ಕದ್ದು ಇತ್ತು. ಆದರೆ ಇತ್ತೀಚಿನ ಮಾಹಿತಿ ಪ್ರಕಾರ ನಮ್ಮ ಅರ್ಕಾವತಿ ಯೋಜನೆಯಿಂದ ಅಷ್ಟೊಂದು ನೀರು ದೊರೆಯುವುದಿಲ್ಲ ಎನ್ನುವ ಅಂಶ ಗೊತ್ತಾದ ಮೇಲೆ ಕಾವೇರಿ ಎರಡನೆಯ ಯೋಜನೆಯನ್ನು ಕೈಗೊಳ್ಳಬೇಕೆಂದು ಕೇಂದ್ರ ಸರ್ಕಾರಕ್ಕೆ ಬರೆದು ಮಂಜೂರಾತಿಗಾಗಿ ಕೇಳಲಾಯಿತು. ಈಗ ಅಲ್ಲಿಂದ ಮಂಜೂರಾತಿ ಬಂದಿದೆ.

K S. R. T. C. bus accidents in the State

566. SRI G. B. SHANKAR RAO (Hirekerur).—Will the Minister for Transport and Tourism be pleased to state.—

(a) the number of accidents to buses belonging to Karnataka State Road Transport Corporation during the year ending 31st December 1978;

(b) the number of persons who lost their lives and who suffered physical infirmity as a result of these accidents;

(c) the amount of compensation paid in these cases;

(d) the steps taken by the Karnataka State Road Transport Corporation to avoid accidents;

(e) whether the Karnataka State Road Transport Corporation has investigated the reasons for the recurring feature of accidents to Karnataka State Road Transport Corporation ?

SRI R. GUNDU RAO (Minister for Transport and Touris).—

(a) 1169 accidents during the year 1978.

(b) No. of deaths ... 199

No. of persons who suffered physical infirmity ... 2